ಹೊಂದಿದ್ದು, ಸದಾ ಕಾಲ ನೀರಿನ ಸೌಲಭ್ಯ ಹೊಂದಿರುವ ಕೆರೆಯಾಗಿದ್ದು ಮೀನು ಸಾಕಣೆಗೆ ಯೋಗ್ಯವಾಗಿರುವುದು. ಈ ಕೆರೆಯಲ್ಲಿ ಮೀನು ಸಾಕಣೆಯನ್ನು ಈಗಾಗಲೇ ಕೈಗೊಳ್ಳಲಾಗುತ್ತಿದೆ. ಆದರೆ ಈ ಕೆರೆಯನ್ನು ಅಭಿವೃದ್ಧಿಪಡಿಸಿದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೀನು ಸಾಕಣೆ ಕೈಗೊಳ್ಳಲು ಸಾಧ್ಯವಿರುವುದು. ಆದುದರಿಂದ, ಈ ಕೆರೆಯನ್ನು ಆಗಲ ಮತ್ತು ಆಳಗೊಳಿಸಲು ಲೋಕೋಪಯೋಗಿ ಇಲಾಖೆ, ಬೆಳಗಾಂ ವಲಯ ಈಗಾಗಲೇ ರೂ. ೩.೧೫ ಲಕ್ಷದ ಅಂದಾಜು ಪಟ್ಟಿಯನ್ನು ತಯಾರಿಸಿರುವುದು ಹಾಗೂ ಇದು ಪರಿಶೀಲನೆಯಲ್ಲಿರುವುದು.

ಈ ಕಾಮಗಾರಿಯನ್ನು ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ತೆಗೆದುಕೊಳ್ಳಲು ಯೋಚಿಸಿದ್ದು, ಈ ಬಗ್ಗೆ ಬೆಳಗಾಂ ಜಿಲ್ಲಾ ಪರಿಷತ್‌ನ ಮುಖ್ಯ ಕಾರ್ಯದರ್ಶಿಗಳೊಂದಿಗೆ ವ್ಯವಹರಿಸಲಾಗಿದೆ. ಪರ್ಯಾಯವಾಗಿ ಈ ಕಾಮಗಾರಿಯನ್ನು ಇಲಾಖಾ ಅನುದಾನವನ್ನು ಪುನರ್ವಿನಿಯೋಗಿಸಿಕೊಂಡು ಕೈಗೆತ್ತಿಕೊಳ್ಳಲಾಗುವುದು. ಈ ಕೆರೆಯನ್ನು ಅಭಿವೃದ್ಧಿಪಡಿಸಿದ ನಂತರ, ಶೀಘ್ರ ಬೆಳೆಯುವ ಉತ್ತಮ ತಳಿಯ ಮೀನು ಮರಿಗಳನ್ನು ಬಿತ್ತನೆ ಮಾಡಿ ಮೀನು ಸಾಕಣೆ ಕೈಗೊಳ್ಳಲಾಗುವುದು.

ಶ್ರೀ ಶಿವಾನಂದ ಎಚ್. ಕೌಜಲಗಿ.—ಜಿಲ್ಲಾ ಪರಿಷತ್‌ನವರಿಗೆ ಬಿಟ್ಟರೆ ಏನೂ ಮಾಡುವುದಿಲ್ಲ. ಇದನ್ನು ಸರ್ಕಾರದವರೇ ಮಾಡಬೇಕು.

ಅಧ್ಯಕ್ಷರು.—ಕ್ಲಾರಿಫೀಕೇಶನ್ ಕೇಳಲಿಕ್ಕೆ ಅವಕಾಶವಿಲ್ಲ ತಾವು ಕೂಡಿ.

೧೯) ರಾಜ್ಯ ಸರ್ಕಾರದ ಅನುದಾನ ಪಡೆಯುತ್ತಿರುವ ಖಾಸಗೀ ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಹೈದ್ರಾಬಾದ್ ವೇತನ ಶ್ರೇಣಿಯನ್ನು ಕೊಡುವಲ್ಲಿ ವಿಳಂಬವಾಗಿರುವುದರ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಾಪಕರುಗಳು ದೇಶದಲ್ಲಿ ವಿದ್ಯಾವಂತರನ್ನು ಸೃಷ್ಟಿ ಮಾಡುವ ಶಿಲ್ಪಿಗಳು. ಅಧ್ಯಾಪಕರ ಸ್ಥಾನಮಾನ ಎತ್ತರವಾದದ್ದು. ಗೌರವಯುತವಾದದ್ದು. ಹೀಗಿದ್ದರೂ ಅವರ ಕಷ್ಟ ಕಾರ್ಪಣ್ಯ ಬಗೆಹರಿಯದೆ ಉಳಿದಿದೆ. ಇದೀಗ ರಾಜ್ಯ ಸರ್ಕಾರದ ಅನುದಾನ ಪಡೆಯುತ್ತಿರುವ ಖಾಸಗೀ ಪ್ರಾಥಮಿಕ ಶಾಲಾ ಅಧ್ಯಾಪಕರ ಹೈದರಾಬಾದ್ ವೇತನ ಶ್ರೇಣಿಯನ್ನು ವಿಸ್ತರಿಸುವುದನ್ನು ಕಾಲಹರಣ ಮಾಡಲಾಗುತ್ತಿದೆ. ಇದು ಖೇದದ ಸಂಗತಿ. ಈ ವೇತನ ಶ್ರೇಣಿ ವಿಸ್ತರಣೆ ಆಗದೆ ಅಧ್ಯಾಪಕರುಗಳು ಭಾರೀ ಕಷ್ಟ ನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಎರಡು ವರ್ಷಗಳಿಂದ ಈ ವಿಚಾರ ಸರಕಾರದ ಗಮನಕ್ಕೆ ತರುತ್ತಾ ಬಂದರೂ ಇನ್ನು ಯಾವುದೇ ನಿರ್ಧಾರವಾಗಿಲ್ಲ. ದಕ್ಷಿಣ ಕನ್ನಡದಲ್ಲಿ ಇಂತಹ ಅಧ್ಯಾಪಕರುಗಳು ತುಂಬಾ ಸಂಖ್ಯೆಯಲ್ಲಿರುತ್ತಾರೆ. ಆದಕಾರಣ ಸರಕಾರದ ಅನುದಾನ ಪಡೆಯುತ್ತಿರುವ ಖಾಸಗಿ ಪ್ರಾಥಮಿಕ ಶಾಲಾ ಅಧ್ಯಾಪಕರುಗಳಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ಕೂಡಲೇ ವಿಸ್ತರಿಸಬೇಕೆಂದು ಆಗ್ರಹಿಸುತ್ತಾ, ಈ ಕುರಿತು ಪ್ರಾಥಮಿಕ ಸ್ಪಾಥ ವಿದ್ಯಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ —ಸಂಬಂಧಪಟ್ಟ ಸಚಿವರು ಮೇಲ್ಮನೆಯಲ್ಲಿದ್ದಾರೆ. ಅವರು ಬಂದನಂತರ ಉತ್ತರ ಕೊಡಿಸಲಿಕ್ಕೆ ಹೇಳುತ್ತೇನೆ.

೨೦) ಹೊಸದುರ್ಗ–ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿಗಳನ್ನು ಕೈಕೊಳ್ಳುವುದರ ಬಗ್ಗೆ

ಶ್ರೀ ಜಿ. ರಾಮದಾಸ್,—ಸತತವಾಗಿ ಕಳೆದ ನಾಲ್ಕು ವರ್ಷಗಳಿಂದಲೂ ಮಳೆ ಬಾರದೆ ತೀವ್ರ ಬರಗಾಲದ ಬವಣೆಗೆ ಸಿಲುಕಿರುವ ಹೊಸದುರ್ಗ ತಾಲ್ಲೂಕಿನಲ್ಲಿ ಜನ, ಜಾನುವಾರುಗಳಿಗೆಕುಡಿಯಲು ನೀರಿಗೂ ಕಡು ಕಷ್ಟವಾಗಿದೆ. ಜನರು ಕಂಗಾಲಾಗಿ ವಲಸೆ ಹೊರಟಿದ್ದಾರೆ. ಬರದ ಕರಾಳ ಛಾಯೆಗೆ ಉದಾಹರಣೆಗೆ ಕಲ್ಲಳ್ಳಿ ಗ್ರಾಮದ ಏರ್ವ ಮಹಿಳೆ ತನ್ನ ೨೦ ದಿನಗಳ ಗಂಡು ಮಗುವನ್ನು ಕೇವಲ ಒಂದು ಸೀರೆ ೫೦ ರೂಪಾಯಿಗೆ ಮಾರಿದ ಘಟನೆ ನಡೆದಿದೆ.